ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ದಿನಾಂಕ: 24-09-2012

ಸಂಖ್ಯೆ: ಸ.ಶಿ.ಅ/ಕೆಕೆಜಿಬಿವಿ/163/2012-13

## ಸುತ್ತೋಲೆ

**ವಿಷಯ:** ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯ ಅನುದಾನದಿಂದ ಪ್ರಾರಂಭಿಸಲಾಗಿರುವ ಕೆಕೆಜಿಬಿವಿಗಳಿಗೆ ಎಸ್.ಎಸ್.ಎ ವತಿಯಿಂದ ಬಿಡುಗಡೆ ಮಾಡಿರುವ ಆವರ್ತಕ ಅನುದಾನದ ನಿರ್ವಹಣೆ ಕುರಿತು.

**ಉಲ್ಲೇಖ:** 1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯೋ11/ವಿ.ಅ.ಯೋ/ಕೆಕೆಜಿ.ಬಿ.ವಿ/04/2012-13 ದಿನಾಂಕ: 27-04-2012.

2. ಸ.ಶಿ.ಅ/ಕೆಕೆಜಿಬಿವಿ/163/2012-13 ದಿನಾಂಕ: 13-08-2012.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2012-13 ನೇ ಸಾಲಿನಿಂದ ಕರ್ನಾಟಕ ಕೆ.ಜಿ.ಬಿ.ವಿ.ಗಳ ಆವರ್ತಕ ವೆಚ್ಚದ ಅನುದಾನ ಬಿಡುಗಡೆ ಮತ್ತು ನಿರ್ವಹಣೆಯನ್ನು ಸರ್ವ ಶಿಕ್ಷಣ ಅಭಿಯಾನ ಕಛೇರಿಯ ಮೂಲಕ ನಿರ್ವಹಿಸಲಾಗುತ್ತಿದೆ. ಮುಂದುವರಿದು ಉಲ್ಲೇಖ-2 ರಂತೆ ಎಸ್.ಎಸ್.ಎ ರಾಜ್ಯ ಕಛೇರಿಯಿಂದಲೇ ಹೊಸ ಬ್ಯಾಂಕ್ ಖಾತೆಗಳನ್ನು ತೆರೆದು ಸದರಿ ಖಾತೆಗಳಿಗೆ ಆವರ್ತಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಈ ಅನುದಾನವನ್ನು ಬಳಕೆ ಮಾಡುವ ಅಧಿಕಾರವನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಹತ್ತಿರದ ಪ್ರೌಢಶಾಲೆ ಅಥವಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರ ಜಂಟಿ ಖಾತೆಯಲ್ಲಿ ನಿರ್ವಹಿಸುವುದು ಸದರಿ ಮುಖ್ಯ ಶಿಕ್ಷಕರನ್ನು ಮೇಲುಸ್ತುವಾರಿಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೇಮಿಸಿ, ಆದೇಶಿಸುವುದು. ಈ ಬಗ್ಗೆ ಕೂಡಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾದರಿ ಸಹಿ ಮತ್ತು ಛಾಯಾ ಪ್ರತಿಗಳನ್ನು ಬ್ಯಾಂಕ್‌ಗೆ ನೀಡಿ, ಖಾತೆಯನ್ನು ಚಾಲನೆಗೊಳಿಸುವುದು. ಯಾವ ಬ್ಯಾಂಕ್‌ನಲ್ಲಿ ಖಾತೆ ಪ್ರಾರಂಭಿಸಲಾಗಿದೆ ಎಂಬ ಮಾಹಿತಿಯನ್ನು ದಿನಾಂಕ: 28-09-2012 ರೊಳಗೆ ಈ ಕಛೇರಿಗೆ ಸಾಫ್ಟ್ ಪ್ರತಿಯನ್ನು (ssagirlsed@yahoo.co.in) ಈ ಇ-ಮೇಲ್ ವಿಳಾಸಕ್ಕೆ ಮತ್ತು ಹಾರ್ಡ್‌ಕಾಪಿಯನ್ನು ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೆಣ್ಣು ಮಕ್ಕಳ ಶಿಕ್ಷಣ ಶಾಖೆ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿಗೆ ವರದಿ ಸಲ್ಲಿಸತಕ್ಕದ್ದು. ರಾಜ್ಯ ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಜ್ಯ ಅನುದಾನದ ಮಾಹಿತಿಯನ್ನು ಮಾತ್ರ ನೀಡುವುದು

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

ಪ್ರತಿಗಳು-ಮುಂದಿನ ಕ್ರಮಕ್ಕಾಗಿ

1. ಸಂಬಂಧಿಸಿದ ಡಿಡಿಪಿಐ (ಆಡಳಿತ) ಮತ್ತು ಡಿವೈಪಿಸಿಗಳ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕೆ.ಕೆ.ಜಿ.ಬಿ.ವಿ. ವಸತಿ ನಿಲಯದ ವಾರ್ಡನ್‌ಗಳಿಗೆ
2. ಮಾನ್ಯ ಆಯುಕ್ತರ ಕಛೇರಿ, ಉಪನಿರ್ದೇಶಕರು (ಯೋಜನೆ) ರವರ -ಮಾಹಿತಿಗಾಗಿ
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ – ಮಾಹಿತಿಗಾಗಿ
4. ಮುಖ್ಯ ಲೆಕ್ಕಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನರವರಿಗೆ ತಿಳಿಸುತ್ತಾ ಎಲ್ಲಾ ಬ್ಯಾಂಕ್‌ಗಳಿಗೆ ಮತ್ತು ಕೇಂದ್ರ ಬ್ಯಾಂಕ್‌ಗೆ ಮಾಹಿತಿ ನೀಡುವ ಸಂಬಂಧ.
5. ಕಛೇರಿ ಪ್ರತಿ.